ಮೂಲ ದಾವಾ ಸಂಖ್ಯೆ. 251/2014 ಡಿ ಡಬ್ಲ್ಯೂ 4

(ದಿನಾಂಕ 04-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಯು ಕೆ ವಕೀಲರಿಂದಃ-

ಎಫ್ ಡಿ ಪಿ ನಂ. 1/2020 ರ ಅರ್ಜಿ ಮತ್ತು ಸಂಪೂರ್ಣ ಆದೇಶ ಪುಟಗಳ ದೃಢೀಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಡಿ-9 ಮತ್ತು 10 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಜಿ ಎನ್ ವಕೀಲರಿಂದಃ-

ಈ ದಾವೆಯಲ್ಲಿ ಪ್ರತಿವಾದ ಪತ್ರ ದಾಖಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಓ ಎಸ್ ನಂ.67/2015 ರ ದಾವೆಗೆ ಮಾಹಿತಿಯನ್ನು ಯಾರೂ ಕೊಟ್ಟಿಲ್ಲ. ದಾವಾಸ್ತಿಯ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ. ದಾವಾಸ್ತಿಯ ಚಕ್ಕುಬಂದಿ ನನಗೆ ಗೊತ್ತಿಲ್ಲ ದಾವಾಸ್ತಿಯು ಹನುಮಗೊಂಡನಹಳ್ಳಿ ಗ್ರಾಮದಲ್ಲಿದೆ. ಸದರಿ ಹನುಮಗೊಂಡನಹಳ್ಳಿಯಲ್ಲಿರುವ ದಾವಾಸ್ತಿಗಳ ಪಹಣಿಗಳು ಎಷ್ಟು ಇವೆ ಅಂತಾ ನನಗೆ ಹೇಳಲು ಬರುವುದಿಲ್ಲ.

ನಮ್ಮ ಮನೆಯಲ್ಲಿ ಎಲ್ಲಾ ವ್ಯವಹಾರವನ್ನು ನಮ್ಮ ತಾಯಿಯವರು ಮಾಡುತ್ತಿದ್ದರು ಎಂದರೆ ಸರಿ. ನಮ್ಮ ತಾಯಿಯವರು ಹೋಟೆಲ್ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ತಾಯಿ ವ್ಯವಹಾರಿಕಳು ಆಗಿರುವುದರಿಂದ ದುಡ್ಡಿನ ಮೌಲ್ಯ ಅವರಿಗೆ ಗೊತ್ತಿತ್ತು ಎಂದರೆ ಸರಿ. ಓ ಎಸ್ ನಂ.67/2015 ರಲ್ಲಿ ದಾವಾಸ್ತಿಯ ಮೌಲ್ಯ ಎಷ್ಟು ಬರೆಸಿರುತ್ತಾರಂತಾ ನನಗೆ ಹೇಳಲು ಬರುವುದಿಲ್ಲ.

ನಾನು ಓ ಎಸ್ ನಂ.67/2015 ನೇ ದಾವೆಯನ್ನು ನನ್ನ ತಾಯಿ, ನನ್ನ ಸಹೋದರರಾದ ಶಿವಕುಮಾರ್, ಶಿರಣಪ್ಪ ಮತ್ತು ಕರಿಬಸಮ್ಮ ಇವರ ವಿರುದ್ಧ ದಾಖಲಿಸಿದ್ದೆ ಎಂದರೆ ಸರಿ. ಕರಿಬಸಮ್ಮ ಇವರಿಗೆ ಕಾವ್ಯ ಅಂತಾ ಕರೆಯುತ್ತಾರೆಂದರೆ ಸರಿ. ಸದರಿ ಓ ಎಸ್ ನಂ.67/2015 ನೇ ದಾವೆಯಲ್ಲಿ ನಾನು ದಾವಾಸ್ತಿಯ ಇ ಸಿ ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ದಾವೆಯಲ್ಲಿ ಪ್ರತಿವಾದಿಯರು ಯಾರು ಪ್ರತಿವಾದ ಪತ್ರ ಸಲ್ಲಿಸಿಲ್ಲವೆಂದರೆ ಸರಿ. ದಾವಾಸ್ತಿಗಳ ಕುರಿತು ದಿಃ13-12-2011 ರಂದು ನನ್ನ ತಾಯಿ ಮತ್ತು ನನ್ನ ಸಹೋದರರು ಸೇರಿ ನೊಂದಾಯಿತ ಕ್ರಯದ ಕರಾರು ಪತ್ರವನ್ನು ಈ ದಾವೆಯ ವಾದಿಗೆ ಬರೆದುಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಂತರದಲ್ಲಿ ಈ ದಾವೆಯ ವಾದಿಯು ನಮ್ಮ ತಾಯಿಗೆ ದಾವಾಸ್ತಿಯನ್ನು ಕ್ರಯದ ಕರಾರು ಪತ್ರದಂತೆ ನೊಂದಾಯಿತ ಕ್ರಯಪತ್ರ ಮಾಡಿಕೊಡಲು ಕೇಳಿಕೊಂಡಿದ್ದು ಆ ಬಗ್ಗೆ ಅವರು ವಕೀಲರ

ನೋಟೀಸನ್ನು ಸಹಾ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ 1 ನೇ ಪ್ರತಿವಾದಿಯು ನ್ಯಾಯಾಲಯದಲ್ಲಿ ಹಾಜರಾಗಿ ಪ್ರತಿವಾದ ಪತ್ರವನ್ನು ಸಹಾ ದಾಖಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಪ್ರತಿ ದಿನಾಂಕದಂದು 1 ನೇ ಪ್ರತಿವಾದಿ ನ್ಯಾಯಾಲಯದಲ್ಲಿ ಹಾಜರಿರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯ ಬಗ್ಗೆ 1 ನೇ ಪ್ರತಿವಾದಿ ನೊಂದಾಯಿತ ದಾಖಲೆ ಬರೆದುಕೊಟ್ಟಿರುವುದರಿಂದ ದಾವಾಸ್ತಿ ಹೋಗುತ್ತದೆನ್ನುವ ಕಾರಣಕ್ಕಾಗಿ ಪ್ರಸ್ತುತ ದಾವೆಯ ವಾದಿಯನ್ನು ಓ ಎಸ್ ನಂ.67/2015 ರಲ್ಲಿ ಪಕ್ಷಕಾರರು ಅಂತಾ ಮಾಡಿರುವುದಿಲ್ಲವೆಂದರೆ ಸರಿಯಲ್ಲ. ನನ್ನ ತಾಯಿಯವರು ದಾವಾಸ್ತಿಗಳನ್ನು ಕಾನೂನುಬದ್ಧ ಅವಶ್ಯಕತೆಗಾಗಿ ವಾದಿಗೆ ಮಾರಾಟ ಮಾಡಿರುವುದರಿಂದ ದಾವಾಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲವೆಂದರೆ ಸರಿಯಲ್ಲ. ಓ ಎಸ್ ನಂ.67/2015 ರಲ್ಲಿ ಪ್ರಸ್ತುತ ದಾವೆಯ ವಾದಿಯು ಪಕ್ಷಕಾರನಾಗಿರಿರುವುದಿಲ್ಲ ಆದ್ದರಿಂದ ಸದರಿ ದಾವೆ ಡಿಕ್ರಿಯ ಮೇಲೆ ದಾಖಲಿಸಿರುವ ಎಫ್ ಡಿ ಪಿ ನಂ.1/2020 ಊರ್ಜಿತವಾಗುವುದಿಲ್ಲವೆಂದರೆ ಸರಿಯಲ್ಲ. ಓ ಎಸ್ ನಂ.67/2015 ರಲ್ಲಿ ನಮ್ಮ ತಾಯಿಗೆ ಎಷ್ಟು ವಿಸ್ತೀರ್ಣದ ಆಸ್ತಿಯು ದಾವಾಸ್ತಿಯಲ್ಲಿ ಬರುತ್ತದಂತಾ ನಿಖರವಾಗಿ ದಾವೆಯ ಶೆಡ್ಯೂಲಿನಲ್ಲಿ ತೋರಿಸಿರುವುದಿಲ್ಲ ಆದ್ದರಿಂದ ಸದರಿ ಎಫ್ ಡಿ ಪಿ ಪ್ರಕರಣ ಊರ್ಜಿತವಾಗುವುದಿಲ್ಲವೆಂದರೆ ಸರಿಯಲ್ಲ. ಈ ದಾವೆಯಲ್ಲಿ 1 ನೇ ಪ್ರತಿವಾದಿಯು ವಾದಿಗೆ ಬರೆದುಕೊಟ್ಟಿರುವಂತಹ ದಾಖಲೆಯನ್ನು ಒಪ್ಪಿಕೊಂಡಿದ್ದು ಇರುತ್ತದೆ ದಾವಾಸ್ತಿಗಳು ವಾದಿಗೆ ಹೋಗುತ್ತವೆನ್ನುವ ಕಾರಣದಿಂದ ಅವನಿಗೆ ತೊಂದರೆ ಕೊಡಲು ದಾವೆಯಲ್ಲಿ ವಿನಾಕಾರಣ ನಾನು ಸೇರ್ಪಡೆಯಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿ, ನನ್ನ ಸಹೋದರರು ಮತ್ತು ಕುಟುಂಬದ ಇತರೆ ಸದಸ್ಯರ ಒಪ್ಪಿಗೆ ಮೇರೆಗೆ ದಾವಾಸ್ತಿಗಳನ್ನು ವಾದಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ.

ನನ್ನ ತಾಯಿ ಮತ್ತು ನನ್ನ ಸಹೋದರರ ಮನೆಗೆ ಹೋಗಿ ಬರುವುದನ್ನು ಮಾಡುತ್ತೇನೆ ಆದರೆ ದಾವಾಸ್ತಿಯ ಮಾರಾಟದ ವಿಚಾರವನ್ನು ಅವರು ನನಗೆ ತಿಳಿಸಿಲ್ಲವೆನ್ನುತ್ತಾರೆ. ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಹೋದರರ ಪ್ರಚೋದನೆಯಿಂದ ಈ ದಾವೆಯನ್ನು ನಾನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ದಾವಾಸ್ತಿಯನ್ನು ಕುಟುಂಬದ ನಿರ್ವಹಣೆಗಾಗಿ ನಮ್ಮ ತಾಯಿ ಮಾರಾಟ ಮಾಡಿರುವುದರಿಂದ ಅದು ನನಗೆ ಮತ್ತು ನನ್ನ ಸಹೋದರಿಗೂ ಬಂಧನಕಾರಿಯಾಗುತ್ತದೆಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಹನುಮಗೊಂಡನಹಳ್ಳಿ ಗ್ರಾಮದ ಸರ್ವೆ ನಂ.131 ಬಿ,

ಮೂಲ ದಾವಾ ಸಂಖ್ಯೆ. 251/2014 ಡಿ ಡಬ್ಲ್ಯೂ 4

1.70 ಎಕರೆ ಜಮೀನಿಗೆ ಮಾತ್ರ ನಾನು ಮತ್ತು ನನ್ನ ಸಹೋದರಿ ಹಕ್ಕುದಾರಳು ಎಂದರೆ ಸರಿಯಲ್ಲ. ದಾವಾಸ್ತಿಯ ಬಗ್ಗೆ ನನ್ನ ತಾಯಿ ವಾದಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದು ಸದರಿ ದಾಖಲೆಗೆ ನನ್ನ ಸಹೋದರು ಸಾಕ್ಷಿದಾರರು ಅಂತಾ ಸಹಿ ಮಾಡಿದ್ದು ದಾವಾಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲವೆಂದರೆ ಸರಿಯಲ್ಲ. ದಾವಾಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ